**ದಿನಾಂಕ: 25-10-2010ರಂದು ಅಪರಾಹ್ನ: 11-00 ಗಂಟೆಗೆ ಹೇಮಾವತಿ ಸಭಾಂಗಣ, ಹಾಸನ ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳು**

ಅಧ್ಯಕ್ಷತೆ: ಶ್ರೀ ಹೆಚ್.ಡಿ ರಾಮೇಗೌಡ
ಅಧ್ಯಕ್ಷರು
ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ

ಹಾಜರಿ:06

ಗೈರು ಹಾಜರಿ:01

| ಕ್ರಸಂ | ವಿಷಯ | ಚರ್ಚೆ | ತೀರ್ಮಾನ |
|---|---|---|---|
| | | ಉಪ ಕಾರ್ಯದರ್ಶಿ(ಆಡಳಿತ)ರವರು ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಸ್ವಾಗತಿಸುತ್ತಾ, ಸಮಿತಿ ಅಧ್ಯಕ್ಷರ ಗೈರು ಹಾಜರಾಗಿರುವುದರಿಂದ, ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ಪೈಕಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಬೇಕೆಂದು ಕೋರಿದರು.<br>ಸಮಿತಿ ಸದಸ್ಯರುಗಳು ಶ್ರೀ ಹೆಚ್.ಡಿ ರಾಮೇಗೌಡ ರವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಬೇಕೆಂದು ಕೋರಿದರು.<br>ಅದರಂತೆ, ಶ್ರೀ ಹೆಚ್.ಡಿ.ರಾಮೇಗೌಡರವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡುವಂತೆ ಕೋರಲಾಯಿತು. | |
| 1 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಹಾಸನ ಇವರ ಕಛೇರಿ ಮತ್ತು ಅವರ ಅನುಷ್ಠಾನಾಧಿಕಾರಿಗಳ ಕಛೇರಿಯ ಪೀಠೋಪಕರಣಗಳ ದುರಸ್ಥಿ ಮತ್ತುಬಣ್ಣ ಲೇಪನ ಮಾಡುವ ಟೆಂಡರ್ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆಡಳಿತ(4)79-ಆರೋಗ್ಯ/2010-11 ದಿನಾಂಕ: 25-10-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಜಿಲ್ಲಾ ಆರೋಗ್ಯ ಮತ್ತುಕುಟುಂಬ ಕಲ್ಯಾಣಾಧಿಕಾರಿಗಳು, ಹಾಸನ ಇವರ ಕಛೇರಿ ಮತ್ತು ಇವರ ಅನುಷ್ಠಾನಾಧಿಕಾರಿಗಳ ಕಛೇರಿಯಲ್ಲಿರುವ ಪೀಠೋಪಕರಣಗಳ ದುರಸ್ಥಿ ಹಾಗೂ ಬಣ್ಣ ಲೇಪನ ಮಾಡುವ ಬಗ್ಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಹಾಸನ ಇವರು 7 ಐಟಂಗಳಿಗೆ ಟೆಂಡರ್ ಕರೆದು, ಟೆಂಡರಿನಲ್ಲಿ ಭಾಗವಹಿಸಿದ ಮೂರು ಸಂಸ್ಥೆಗಳ ಪೈಕಿ ಮೆ: ಶ್ರೀ ಭೂಮಿಕಾ ಎಂಟರ್‌ಪ್ರೈಸಸ್, ಹಾಸನ ಇವರು ಕಡಿಮೆ ದರ ಸೂಚಿಸಿರುವುದರಿಂದ, ಸದರಿ ಸಂಸ್ಥೆಯಿಂದ ಪೀಠೋಪಕರಣಗಳನ್ನು ದುರಸ್ಥಿ ಮಾಡಿಸಲು ಮತ್ತು ಬಣ್ಣ ಲೇಪನ ಮಾಡಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಕೋರಿ, ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ ಹಾಗೂ ಸದರಿ ದುರಸ್ತಿಗಳಿಗೆ ತಗಲುವ ವೆಚ್ಚವನ್ನು 2210-03-800-0-52 ಯೋಜನೆ ಲೆಕ್ಕಶೀರ್ಷಿಕೆಯಲ್ಲಿ 2010-11 ನೇ ಸಾಲಿನ ಲಿಂಕ್ ಪುಸ್ತಕದಲ್ಲಿ ನಿಗದಿಯಾಗಿರುವ ರೂ.5.00ಲಕ್ಷ ಅನುದಾನದಡಿಯಲ್ಲಿ ರೂ.2.00ಲಕ್ಷ ವೆಚ್ಚ ಭರಿಸುವುದಾಗಿ ತಿಳಿಸುತ್ತಾ, ಅನುಮೋದನೆಯನ್ನು ನೀಡಬೇಕೆಂದು ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಪರಿಶೀಲಿಸಲಾಯಿತು.<br>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಕೋರಿರುವಂತೆ ಹಾಸನ ಜಿಲ್ಲಾ ಕಛೇರಿ ಮತ್ತು ಇವರ ಅನುಷ್ಠಾನಾಧಿಕಾರಿಗಳ ಕಛೇರಿಯಲ್ಲಿರುವ ಪೀಠೋಪಕರಣಗಳ ದುರಸ್ಥಿಗೆ ಸಂಬಂಧಿಸಿದಂತೆ, ಟೆಂಡರಿನಲ್ಲಿ ಕಡಿಮೆ ದರ ನಮೂದಿಸಿರುವ ಶ್ರೀ ಭೂಮಿಕಾ ಎಂಟರ್ ಪ್ರೈಸಸ್, ಹಾಸನ ಇವರಿಂದ ದುರಸ್ಥಿ ಪಡಿಸಲು ಹಾಗೂ ದುರಸ್ಥಿಗೆ ತಗಲುವ ರೂ.2.00ಲಕ್ಷ (ರೂಪಾಯಿ ಎರಡು ಲಕ್ಷ ಮಾತ್ರ)ಗಳ ವೆಚ್ಚವನ್ನು 2010-11ನೇ ಸಾಲಿನ |

| | | | |
|---|---|---|---|
| | | | ಯೋಜನೆ ಲೆಕ್ಕಶೀರ್ಷಿಕೆ 2210-03-800-0-52 ಅಡಿ ಯಲ್ಲಿ ನಿಗದಿಯಾಗಿರುವ ರೂ.5.00 ಲಕ್ಷಗಳಲ್ಲಿ ಭರಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. |
| | | ಉಪ ಕಾರ್ಯದರ್ಶಿ(ಆಡಳಿತ)ರವರು ಮಾತನಾಡುತ್ತಾ, ಕಳೆದ ಸಭೆಯಲ್ಲಿ ಪ್ರೌಢಶಾಲೆಗಳ ಕಟ್ಟಡ ದುರಸ್ಥಿಗೆ ಸಂಬಂಧಿಸಿದಂತೆ, ರೂ.30.00ಲಕ್ಷಗಳ ಅನುದಾನ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗಗಳವರು ಅವರ ತಾಲ್ಲೂಕಿಗೆ ಸಂಬಂಧಪಟ್ಟ ಕಾಮಗಾರಿಗಳ ಪಟ್ಟಿಯನ್ನು ಪಡೆದು ಕಾಮಗಾರಿಗಳ ಅನುಷ್ಠಾನಕ್ಕೆ ಕ್ರಮ ವಹಿಸಬೇಕೆಂದು ತಿಳಿಸಲಾಯಿತು.<br>ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಸ್.ಶಂಕರ್‌ರವರು ಮಾತನಾಡುತ್ತಾ, ಪ್ರೌಢಶಾಲೆಗಳ ಕಟ್ಟಡ ದುರಸ್ಥಿ ಯೋಜನೆಯಡಿಯಲ್ಲಿ ಕ್ರಿಯಾ ಯೋಜನೆಯಲ್ಲಿ ರಾಮನಾಥಪುರ ಸರ್ಕಾರಿ ಪ್ರೌಢಶಾಲೆಯೆಂದು ಅನುಮೋದನೆಯಾಗಿರುತ್ತದೆ. ಆದರೆ, ರಾಮನಾಥಪುರದಲ್ಲಿ ಸರ್ಕಾರಿ ಪ್ರೌಢಶಾಲೆಯಿರುವುದಿಲ್ಲ. ಆದ್ದರಿಂದ, ರಾಮನಾಥಪುರ ಸರ್ಕಾರಿ ಪ್ರೌಢಶಾಲೆ ಬದಲಿಗೆ ಬಸವಾಪಟ್ಟಣ ಸರ್ಕಾರಿ ಪ್ರೌಢಶಾಲೆ ಎಂದು ಬದಲಾವಣೆ ಮಾಡಬೇಕೆಂದು ಕೋರಿದರು.<br>ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಅನುಷ್ಠಾನ ಮಾಡುವ ಕಾಮಗಾರಿಗಳ ಪಟ್ಟಿಯನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿ ಸದಸ್ಯರಿಗೆ ನೀಡಲು ಕ್ರಮ ವಹಿಸಬೇಕೆಂದು ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಸೂಚಿಸಲಾಯಿತು.<br>ಮಾನ್ಯ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, ಅತ್ತಿಚೌಡೇನಹಳ್ಳಿ ಮತ್ತು ಕೋಡಿಹಳ್ಳಿ ಗ್ರಾಮದ ಮದ್ಯೆಯಿರುವ ಪ್ರೌಢಶಾಲೆ, ಬನಕುಪ್ಪೆ ಹಾಗೂ ಬಿಟ್ಟಗೋಡನಹಳ್ಳಿ ಮಧ್ಯೆ ಇರುವ ಪ್ರೌಢಶಾಲೆ ಮತ್ತು ಹರಿಹರಪುರ ಗ್ರಾಮಗಳಲ್ಲಿರುವ ಪ್ರೌಢಶಾಲೆ ಮತ್ತು ಮಾಧ್ಯಮಿಕ ಶಾಲೆಗಳ ನಡುವಿನ ಅಂತರ ಹೆಚ್ಚಿರುವುದರಿಂದ, ಅಕ್ಷರ ದಾಸೋಹ ಕಾರ್ಯಕ್ರಮದಡಿಯಲ್ಲಿ ಪ್ರತಿ ಶಾಲೆಯಲ್ಲಿ ಪ್ರತ್ಯೇಕವಾಗಿ ಅಡುಗೆಯನ್ನು ಮಾಡಲು ಕ್ರಮ ವಹಿಸಬೇಕೆಂಧು ಕೋರಿದರು.<br>ಸಮಿತಿ ಸದಸ್ಯರುಗಳು ಅಕ್ಷರ ದಾಸೋಹ ಕಾರ್ಯಕ್ರಮದಡಿಯಲ್ಲಿ ಎಷ್ಟು ಅಡುಗೆ ಮನೆಗಳು ಬಾಕಿ ಇವೆ ಎಂಬ ಬಗ್ಗೆ ವಿವರಗಳನ್ನು ನೀಡುವಂತೆ ಕೋರಿದರು.<br>ಶಿಕ್ಷಣಾಧಿಕಾರಿ, ಅಕ್ಷರ ದಾಸೋಹ ಇವರು ಉತ್ತರಿಸುತ್ತಾ, 2005-06ನೇ ಸಾಲಿನಲ್ಲಿ 131 ಅಡುಗೆ ಮನೆಗಳು ಮಂಜೂರಾಗಿದ್ದು, ಇವುಗಳನ್ನು ನಿರ್ಮಿತಿ ಕೇಂದ್ರದ ವತಿಯಿಂದ ಅನುಷ್ಠಾನ ಮಾಡಿದ್ದು, ಕೇವಲ 38 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಉಳಿದ ಕಾಮಗಾರಿಗಳು ವಿವಿಧ | ಸಭೆಯಲ್ಲಿ ಚರ್ಚಿಸಿದಂತೆ, ಶ್ರೀ ಹೆಚ್.ಎಸ್. ಶಂಕರ್, ಮಾನ್ಯ ಜಿಲ್ಲಾ ಪಂಚಾಯಿತಿ ಸದಸ್ಯರು ಕೋರಿರುವಂತೆ 2010-11ನೇ ಸಾಲಿನ ಪ್ರೌಢಶಾಲೆಗಳ ದುರಸ್ಥಿ ಯೋಜನೆಯಡಿ ಕ್ರಿಯಾ ಯೋಜನೆಯಡಿ ಮಂಜೂರಾಗಿರುವ ರಾಮನಾಥಪುರ ಸರ್ಕಾರಿ ಪ್ರೌಢಶಾಲೆಗೆ ಬದಲಾಗಿ ಬಸವಾಪಟ್ಟಣ ಸರ್ಕಾರಿ ಪ್ರೌಢಶಾಲೆ ಎಂದು ಬದಲಾವಣೆ ಮಾಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |

| | | | |
|---|---|---|---|
| | | ಹಂತದಲ್ಲಿರುತ್ತವೆ ಎಂದು ಸಭೆಗೆ ವಿವರ ನೀಡಿದರು. 2006-07ನೇ ಸಾಲಿನಿಂದ ಮಂಜೂರಾಗಿರುವ ಅಡುಗೆ ಕೋಣೆಗಳನ್ನು ಎಸ್.ಡಿ.ಎಂ.ಸಿ ವತಿಯಿಂದ ಅನುಷ್ಠಾನ ಮಾಡಿದ್ದು, ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಎಂದು ಸಭೆಗೆ ವಿವರ ನೀಡಿದರು.<br>ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಸ್.ಶಂಕರ್‌ರವರು ಮಾತನಾಡುತ್ತಾ, ವಯಸ್ಕರ ಶಿಕ್ಷಣ ಇಲಾಖೆಯ ಪ್ರೇರಕರಿಗೆ ಗೌರವಧನ ನೀಡುವ ಬಗ್ಗೆ ಏನು ಕ್ರಮ ವಹಿಸಲಾಗಿದೆ ಎನ್ನುವ ಕುರಿತು ವಿವರ ನೀಡಬೇಕೆಂದು ಕೋರಿದರು.<br>ಉಪ ಕಾರ್ಯದರ್ಶಿ(ಆಡಳಿತ)ರವರು ಮಾತನಾಡುತ್ತಾ, ಮುಂದುವರಿಕೆ ಶಿಕ್ಷಣ ಕೇಂದ್ರಗಳ ಪ್ರೇರಕರಿಗೆ ಗೌರವಧನ ನೀಡಲು ಅನುದಾನ ಲಭ್ಯವಿದ್ದು, 5 ತಿಂಗಳ ಗೌರವಧನವನ್ನು ನೀಡಲು ಕ್ರಮ ವಹಿಸಬೇಕೆಂದು ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಯವರಿಗೆ ತಿಳಿಸಿದರು.<br>ಮುಂದುವರೆದು, ಡಾ: ನಂಜುಂಡಪ್ಪ ವರದಿ ಆಧಾರಿತ ವಿಶೇಷ ಅಭಿವೃದ್ಧಿ ಯೋಜನೆಯಡಿ ಜಿಲ್ಲೆಯ 5 ತಾಲ್ಲೂಕುಗಳಿಗೆ ರೂ.5.546ಲಕ್ಷ ಅನುದಾನವನ್ನು ಬಿಡುಗಡೆ ಮಾಡಲು ಕ್ರಮ ವಹಿಸಬೇಕೆಂದೂ ಸಹ ತಿಳಿಸಲಾಯಿತು.<br>ಜಲಮಣಿ ಯೋಜನೆಯಡಿ ಪ್ರಸಕ್ತ ಸಾಲಿಗೆ ಮಂಜೂರಾಗಿರುವ ಶಾಲೆಗಳಿಗೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲು ಕ್ರಮ ವಹಿಸಬೇಕೆಂದು ಕಾರ್ಯಪಾಲಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ ಸೂಚಿಸಲಾಯಿತು.<br>ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಸ್.ಶಂಕರ್‌ರವರು ಮಾತನಾಡುತ್ತಾ, ಹನ್ಯಾಳು ಗ್ರಾಮದಲ್ಲಿ ಪ್ರೌಢಶಾಲೆ ಕಟ್ಟಡ ಕಾಮಗಾರಿಯು ಪೂರ್ಣಗೊಂಡಿದ್ದು, ಇಲ್ಲಿಯವರೆಗೆ ಮಕ್ಕಳ ಉಪಯೋಗಕ್ಕೆ ನೀಡಿರುವುದಿಲ್ಲ ಈ ಬಗ್ಗೆ ಕ್ರಮ ವಹಿಸಬೇಕೆಂದು ಕೋರಿದರು.<br>ಉಪ ಕಾರ್ಯದರ್ಶಿ (ಆಡಳಿತ)ರವರು ಮಾತನಾಡುತ್ತಾ, ಶಾಲೆಗಳಿಗೆ ಅವಶ್ಯವಿರುವ ಶೌಚಾಲಯ, ಕುಡಿಯುವ ನೀರಿನ ಸೌಲಭ್ಯ, ಕಾಂಪೌಂಡ್ ಸೌಲಭ್ಯಗಳು ಬೇಕಾಗಿರುವ ಶಾಲೆಗಳ ಪಟ್ಟಿಯನ್ನು ಸಿದ್ಧಪಡಿಸಿ ನೀಡಬೇಕೆಂದು ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ ಇವರಿಗೆ ಸೂಚಿಸಲಾಯಿತು.<br>ಆರ್.ಐ.ಡಿ.ಎಫ್ ಪ್ರೌಢಶಾಲಾ ಕಟ್ಟಡಗಳಿಗೆ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿದ್ದು, ಹಣವನ್ನು ವಿನಿಯೋಗ ಮಾಡಲು ಕ್ರಮ ವಹಿಸಬೇಕೆಂದು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಮತ್ತು ಚನ್ನರಾಯಪಟ್ಟಣ ಇವರಿಗೆ ತಿಳಿಸಲಾಯಿತು. | |

| | | | |
|---|---|---|---|
| 2 | ಕೇರಳಾಪುರ ಆಸ್ಪತ್ರೆಗೆ ಎಕ್ಸರೇ ಯಂತ್ರದ ಅಳವಡಿಕೆ ಬಗ್ಗೆ | ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಸ್.ಶಂಕರ್‌ರವರು ಮಾತನಾಡುತ್ತಾ, ಕೇರಳಾಪುರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅಳವಡಿಸಿರುವ ಎಕ್ಸರೇ ಯಂತ್ರಕ್ಕೆ ಸಮರ್ಪಕ ವಿದ್ಯುತ್ ಸಂಪರ್ಕವಿಲ್ಲದೆ ಕಾರ್ಯನಿರ್ವಹಿಸುತ್ತಿಲ್ಲ. ಆದ್ದರಿಂದ, ವಿದ್ಯುತ್ ಸಂಪರ್ಕಕ್ಕೆ ಅಗತ್ಯ ಕ್ರಮ ವಹಿಸಬೇಕೆಂದು ಕೋರಿದರು.<br>ಉಪ ಕಾರ್ಯದರ್ಶಿ(ಆಡಳಿತ)ರವರು ಮಾತನಾಡುತ್ತಾ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಯೋಜನೆ/ ಅಥವಾ ಯೋಜನೇತರ ಕಾರ್ಯಕ್ರಮದಡಿಯಲ್ಲಿ ಉಳಿತಾಯವಾಗುವ ಯಾವುದಾದರೂ ಅನುದಾನದಲ್ಲಿ ವಿದ್ಯುತ್ ಸಂಪರ್ಕಕ್ಕೆ ಅವಶ್ಯವಿರುವ ಅನುದಾನವನ್ನು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮಕ್ಕೆ ನೀಡಿ ವಿದ್ಯುತ್ ಸೌಲಭ್ಯವನ್ನು ಕಲ್ಪಿಸಿ ಎಕ್ಸರೇ ಯಂತ್ರವನ್ನು ಸಾರ್ವಜನಿಕರ ಉಪಯೋಗಕ್ಕೆ ನೀಡಲು ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಿದರು.<br>ಮುಂದುವರೆದು 24/7 ಆಸ್ಪತ್ರೆಗಳಿಗೆ ಎಲ್ಲಾ ಅವಶ್ಯ ಸೌಲಭ್ಯಗಳನ್ನು ಕಲ್ಪಿಸಲು ಅಗತ್ಯ ಕ್ರಮ ವಹಿಸಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ಸೂಚಿಸಲಾಯಿತು.<br>ಮಾನ್ಯ ಅಧ್ಯಕ್ಷರಾದ ಶ್ರೀ ಹೆಚ್.ಡಿ.ರಾಮೇಗೌಡರವರು ಮಾತನಾಡುತ್ತಾ, ದೊಡ್ಡಕುಂಚೇವು ಗ್ರಾಮಕ್ಕೆ ಮಂಜೂರಾಗಿರುವ ಸಮುದಾಯ ಆರೋಗ್ಯ ಕೇಂದ್ರದ ಕಟ್ಟಡ ನಿರ್ಮಾಣ ಮಾಡಲು ಗ್ರಾಮದಲ್ಲಿ ಸ್ಥಳಾವಕಾಶ ಇರುವುದಿಲ್ಲ ಮತ್ತು ಹರಿಹರಪುರ ಗ್ರಾಮದಲ್ಲಿ ಕಟ್ಟಡ ನಿರ್ಮಾಣಕ್ಕೆ ಸ್ಥಳವಕಾಶ ಇರುತ್ತದೆ. ಅಲ್ಲದೆ, ಗ್ರಾಮವು ಕೇಂದ್ರಸ್ಥಾನದಲ್ಲಿದ್ದು, ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗುವುದರಿಂದ, ದೊಡ್ಡ ಕುಂಚೇವು ಗ್ರಾಮಕ್ಕೆ ಮಂಜೂರಾಗಿರುವ ಸಮುದಾಯ ಆರೋಗ್ಯ ಕೇಂದ್ರವನ್ನು ಹರಿಹರಪುರಕ್ಕೆ ಬದಲಾವಣೆ ಮಾಡಲು ಕ್ರಮ ವಹಿಸಬೇಕೆಂದು ಹಿಂದಿನ ಸಭೆಗಳಲ್ಲಿ ಕೋರಿದ್ದರೂ ಸಹ ಇಲ್ಲಿಯವರೆಗೆ ಯಾವುದೇ ಕ್ರಮ ವಹಿಸಿಲ್ಲದೇ ಇರುವ ಬಗ್ಗೆ ಆಕ್ಷೇಪವನ್ನು ವ್ಯಕ್ತಪಡಿಸಿದರು ಮತ್ತು ತ್ವರಿತವಾಗಿ ಈ ಬಗ್ಗೆ ಸೂಕ್ತ ಕ್ರಮ ವಹಿಸಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ತಿಳಿಸಿದರು. | ಸಭೆಯಲ್ಲಿ ಚರ್ಚಿಸಿದಂತೆ, ಅರಕಲಗೂಡು ತಾ: ಕೇರಳಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅಳವಡಿಸಿರುವ ಎಕ್ಸರೇ ಯಂತ್ರಕ್ಕೆ ಅವಶ್ಯವಿರುವ ವಿದ್ಯುತ್ ಸಂಪರ್ಕ ಕಲ್ಪಿಸಲು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮಕ್ಕೆ ಕಟ್ಟಬೇಕಾಗಿರುವ ಠೇವಣಿ ಹಣವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ 2010-11ನೇ ಸಾಲಿಗೆ ಯೋಜನೆ ಅಥವಾ ಯೋಜನೇತರ ಕಾರ್ಯಕ್ರಮದಲ್ಲಿ ಉಳಿತಾಯವಾಗುವ ಯಾವುದಾದರೂ ಅನುದಾನದಿಂದ ಭರಿಸಲು ಕ್ರಮ ವಹಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ತಿಳಿಸಲಾಯಿತು. |
| 3 | ಕುಡಿಯುವ ನೀರಿನ ಯೋಜನೆ ಬಗ್ಗೆ | ಉಪ ಕಾರ್ಯದರ್ಶಿ(ಆಡಳಿತ)ರವರು ಮಾತನಾಡುತ್ತಾ, 2009-10ನೇ ಸಾಲಿನ ಕುಡಿಯುವ ನೀರಿನ ಯೋಜನೆಯ ಮುಂದುವರೆದ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಹಾಸನ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ರೂ.380.00ಲಕ್ಷ ಹಾಗೂ ಚನ್ನರಾಯಪಟ್ಟಣ ವಿಭಾಗಕ್ಕೆ ರೂ.80.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿದ್ದು, ಅನುದಾನವನ್ನು ಸಮರ್ಪಕವಾಗಿ ವಿನಿಯೋಗಿಸಲು ಕ್ರಮ ವಹಿಸಬೇಕೆಂದು ತಿಳಿಸಿದರು. | |

| | | | |
|---|---|---|---|
| | | ಮುಂದುವರೆದ ಕಾಮಗಾರಿಗಳ ಪಟ್ಟಿಯನ್ನು ಐ.ಎಂ.ಐ.ಎಸ್‌ನಲ್ಲಿ ದಾಖಲಿಸಲು ಕ್ರಮ ವಹಿಸಬೇಕೆಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗಗಳವರಿಗೆ ತಿಳಿಸಲಾಯಿತು. | |
| 4 | ಕೊಣನೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಒಳರೋಗಿಗಳಿಗೆ ಆಹಾರ ಸರಬರಾಜು ಮಾಡುವುದು ಹಾಗೂ ಕೇಂದ್ರದಲ್ಲಿ ಶುಚಿತ್ವವನ್ನು ಕಾಪಾಡುವ ಕುರಿತು. | ಮಾನ್ಯ ಜಿಲ್ಲಾ ಪಂಚಾಯಿತಿ ಸದಸ್ಯರಾದ ಶ್ರೀ ಬಿ.ಜೆ.ಅಪ್ಪಣ್ಣರವರು ಮನವಿಯನ್ನು ಸಲ್ಲಿಸಿ ಅರಕಲಗೂಡು ತಾಲ್ಲೂಕು ಕೊಣನೂರಿನಲ್ಲಿ ಸಮುದಾಯ ಆರೋಗ್ಯ ಕೇಂದ್ರವಿದ್ದು, ಸದರಿ ಆರೋಗ್ಯ ಕೇಂದ್ರಕ್ಕೆ ಪ್ರತಿನಿತ್ಯ 200-250 ಹೊರರೋಗಿಗಳು ಚಿಕಿತ್ಸೆ ಪಡೆಯುತ್ತಿರುತ್ತಾರೆ. ಕೇಂದ್ರದಲ್ಲಿ ಒಳರೋಗಿಗಳಿಗೆ ಸರಬರಾಜು ಮಾಡುತ್ತಿದ್ದ ಆಹಾರವನ್ನು ನಿಲ್ಲಿಸಲಾಗಿದ್ದು, ಸದರಿ ಕೇಂದ್ರಕ್ಕೆ ಸುತ್ತಮುತ್ತಲಿನ ಅನೇಕ ಬಡ ರೋಗಿಗಳು ತಪಾಸಣೆಗೆ ಬಂದು ಒಳರೋಗಿಗಳಾಗಿ ಹೆಚ್ಚಿನ ಸಂಖ್ಯೆಯಲ್ಲಿ ಉಳಿಯುವ ರೋಗಿಗಳಿಗೆ ಆಹಾರವನ್ನು ಪುನ: ಸರಬರಾಜು ಮಾಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಮತ್ತು ಸದರಿ ಕೇಂದ್ರದಲ್ಲಿ 11 ಡಿ-ಗ್ರೂಪ್ ನೌಕರರ ಹುದ್ದೆ ಇದ್ದು, 4 ಜನ ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದು, ಉಳಿದ 7 ಹುದ್ದೆಗಳು ಖಾಲಿ ಇರುತ್ತವೆ. ಇದರಿಂದ, ಕೇಂದ್ರದ ದೈನಂದಿನ ಕೆಲಸಕ್ಕೆ ಸಹ ತೊಂದರೆ ಆಗುತ್ತಿರುತ್ತದೆ. ಆರೋಗ್ಯ ಕೇಂದ್ರದಲ್ಲಿ ಶುಚಿತ್ವವನ್ನು ಕಾಪಾಡಲು ಸಂಬಂದಿಸಿದ ಸೂಕ್ತ ಕ್ರಮವನ್ನು ಕೈಗೊಳ್ಳಲು ಸೂಚಿಸಬೇಕೆಂದು ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಕೊಣನೂರು ಸಮುದಯ ಆರೋಗ್ಯ ಕೇಂದ್ರದಲ್ಲಿ ಒಳರೋಗಿಗಳಿಗೆ ಆಹಾರವನ್ನು ಸರಬರಾಜು ಮಾಡಲು ಮತ್ತು ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್-ಡಿ ನೌಕರರನ್ನು ನೇಮಿಸಿಕೊಂಡು ಆಸ್ಪತ್ರೆಯ ಶುಚಿತ್ವವನ್ನು ಕಾಪಾಡುವ ಬಗ್ಗೆ ಅಗತ್ಯ ಕ್ರಮ ವಹಿಸಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ತಿಳಿಸಲಾಯಿತು. |
| | | ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | |

(ಹೆಚ್.ಡಿ.ರಾಮೇಗೌಡ)
ಅಧ್ಯಕ್ಷರು
ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ
ಜಿಲ್ಲಾ ಪಂಚಾಯಿತಿ, ಹಾಸನ